ಇದು ಮೋಲ್ನಾಟಕ್ಕೆ ಹಕ್ಕುಚ್ಯುತಿ ಆದಂತೆ ಕಂಡು ಬರುವುದರಿಂದ ಇದನ್ನು ಸದನದ ಹಕ್ಕುಚ್ಯುತಿ ಸಮಿತಿಗೆ ಒಪ್ಪಿಸಲು ತೀರ್ಮಾನಿಸಿದ್ದೇನೆ. ಇದನ್ನು ಹಕ್ಕುಚ್ಯುತಿ ಸಮಿತಿಗೆ ಮುಂದಿನ ವಿಚಾರಕ್ಕೆ ಕಳುಹಿಸಿ ಕೊಡಲಾಗಿದೆ. ಈಗ ಸದನವನ್ನು 3–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 06 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 3–00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3 ಗಂಟೆ 27 ನಿಮಿಷಕ್ಕೆ ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಶ್ರೀ ಹೆಚ್.ಸಿ. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ದಯಮಾಡಿ ಶೂನ್ಯ ವೇಳೆಗೆ ಅವಕಾಶ ಮಾಡಿಕೊಡಬೇಕು. ನಾವು ನಿನ್ನೆಯಿಂದ ಕಾಯುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರೆ, ಶೂನ್ಯವೇಳೆ ಒಂದು ಮುಗಿಸಲೇ?

ಶ್ರೀ ಹೆಚ್.ಸಿ. ಬಾಲಕೃಷ್ಣ:– ದಯಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಒಂದು ಮನವಿ ಹತ್ತು ನಿಮಿಷ ಶೂನ್ಯ ವೇಳೆಯನ್ನು ತೆಗೆದುಕೊಳ್ಳಲು ಅವಕಾಶ ಮಾಡಿಕೊಡಬೇಕು.

ಶ್ರೀ ಸಿದ್ದರಾಮಯ್ಯ:– ನಿಯಮ 60ರ ಅಡಿಯಲ್ಲಿ ನಾವು ನೋಟೀಸ್ ಕೊಟ್ಟಿದ್ದೇವೆ. ಶೂನ್ಯ ವೇಳೆ ತೆಗೆದುಕೊಳ್ಳಲಿ, ನಾನು ಬೇಡ ಎಂದು ಹೇಳುವುದಿಲ್ಲ. ಈಗಾಗಲೇ ಮೂರು ಗಂಟೆಯ ಮೇಲೆ ಪ್ರಶ್ನೋತ್ತರ ಆಗಿದೆ. ನಾವು ಇದನ್ನು ಯಾವಾಗ ಚರ್ಚೆ ಮಾಡುವುದು?

ಶ್ರೀ ಹೆಚ್.ಸಿ. ಬಾಲಕೃಷ್ಣ:– ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮನವಿ ಮಾಡುತ್ತಿದ್ದೇವೆ. ಶೂನ್ಯ ವೇಳೆ ಅರ್ಧ ಗಂಟೆಯಲ್ಲಿ ಮುಗಿಯುತ್ತದೆ.

ಶ್ರೀ ಸಿದ್ದರಾಮಯ್ಯ:– ಕಳೆದ ಬಾರಿಯೂ ಸಹ ಚರ್ಚೆಗೆ ಅವಕಾಶ ಕೊಡಲಿಲ್ಲ.

ಅಧ್ಯಕ್ಷರು:– ನಾನು ಅವಕಾಶ ಕೊಟ್ಟಿದ್ದೆ.

ಶ್ರೀ ಸಿದ್ದರಾಮಯ್ಯ:– ಕೋರಂ ಇಲ್ಲದ ಹಾಗೆ ಮಾಡಿದಿರಿ.

ಅಧ್ಯಕ್ಷರು:– ನಾನು ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ:– ನೀವು ಮಾಡಿದಿರೋ ಯಾರು ಮಾಡಿದರೋ ಗೊತ್ತಿಲ್ಲ. ಸರ್ಕಾರವೇ ಮಾಡಿತು.

ಶ್ರೀ ಹೆಚ್.ಸಿ. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಗೆ ಅವಕಾಶ ಮಾಡಿಕೊಡಿ. ಇದು important ಇದೆ ಸಾರ್. ಬಹಳಷ್ಟು ಸಮಸ್ಯೆಯಾಗಿದೆ. 5–6 ವಿಷಯಗಳು ಮಾತ್ರ ಇವೆ ಅಷ್ಟೇ.

ಶ್ರೀ ಡಿ.ಎನ್. ಜೀವರಾಜ್:– ನಾವು ತಮ್ಮ ಹತ್ತಿರ request ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಜೀವರಾಜ್‌ರವರೆ, ತಾವು ಏಕೋ ಬಹಳ ಅಪಾಯಕಾರಿ ಇದ್ದೀರಿ.

ಶ್ರೀ ಡಿ.ಎನ್. ಜೀವರಾಜ್:– ತಮ್ಮ ಹತ್ತಿರ request ಮಾಡಿದ್ದೇವೆ ಸಾರ್. ನಾನು ಕೈ ಮುಗಿದು request ಮಾಡಿದ್ದೆ.

ಶ್ರೀ ಸಿದ್ದರಾಮಯ್ಯ:– ಆಯಿತು ಬೇಗ ಮುಗಿಸಿ.

ಅಧ್ಯಕ್ಷರು:– ಈಗ ಶೂನ್ಯ ವೇಳೆ, ಮಾನ್ಯ ಶ್ರೀ ಸಿ.ಎಸ್. ನಾಡಗೌಡರು ಹಾಜರಿಲ್ಲ. ಮಾನ್ಯ ಶ್ರೀ ಶ್ರೀಕಾಂತ್ ಕುಲಕರ್ಣಿಯವರು ಪ್ರಸ್ತಾಪ ಮಾಡುವುದು. ಎಲ್ಲಾ short ಆಗಿ ಹೇಳಬೇಕು.